ಅಧ್ಯಕ್ಷರು:- ಆರೋಗ್ಯ ಮಂತ್ರಿಗಳ ಹತ್ತಿರ ಇವತ್ತೇ ಕೂಡಲೇ ಮಾತನಾಡಿ ನಾನು ಮಾಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ನಮಗೆ ಅವಕಾಶ ಕೊಡುತ್ತೀರಿ. ತಮಗೆ ವಂದನೆಗಳು.

ಅಧ್ಯಕ್ಷರು:- ನಾನು ಮಾನ್ಯ ಆರೋಗ್ಯ ಮಂತ್ರಿಗಳನ್ನು ಇವತ್ತು ಸಂಜೆ ಒಳಗಾಗಿ ಕರೆಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಆರೋಗ್ಯ ಸಚಿವರು ಏನು ಹೇಳಿದರು ಎಂದರೆ ಸಾರ್ವಜನಿಕರ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ತತ್‌ಕ್ಷಣವೇ ವೈದ್ಯಾಧಿಕಾರಿಗಳನ್ನು ನಾವು ನೇಮಿಸದೇ ಹೋದಲ್ಲಿ ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದರು. ಈ ವಿಚಾರದಲ್ಲಿ ತಮ್ಮ ಸಮ್ಮುಖದಲ್ಲಿ ಹೇಳುತ್ತಿದ್ದೇನೆ, ವೈದ್ಯಾಧಿಕಾರಿಗಳನ್ನು ನೇಮಿಸದೇ ಇರುವ ಕಾರಣ ಅವರು ಏತಕ್ಕೆ ರಾಜೀನಾಮೆ ಕೊಡಬಾರದು ಎಂದು ಕೇಳುತ್ತೇನೆ.

ಅಧ್ಯಕ್ಷರು:- ರಾಜೀನಾಮೆ ಅವರದು ಬೇಡ. ನಿಮ್ಮದು ಬೇಡ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಲೋಕ ಸೇವಾ ಆಯೋಗದವರು ಈಗಾಗಲೇ ಶಿಫಾರಸ್ಸು ಮಾಡಿದ್ದಾರೆ.

ಉ. ಮಾಹಜನ್ ವರದಿಯನ್ನು ಕಾರ್ಯಗತ ಮಾಡುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಬಹಳ ಸುದೀರ್ಘವಾಗಿ ಈ ಸಭೆಯಲ್ಲಿ ಚರ್ಚೆ ಆಗಿದೆ. ಸರ್ಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಮಹಾಜನ್ ವರದಿಯನ್ನು ಕಾರ್ಯಗತ ಮಾಡುವ ಬಗ್ಗೆ ಮಹಾರಾಷ್ಟ್ರದಲ್ಲಿ ಈಗ ಅವರು ನಿಯೋಗ ಹೋಗುತ್ತಿದ್ದಾರೆ. ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗಿದ್ದಾರೆ. ಪಾರ್ಲಿಮೆಂಟ್ ಮುಂದೆ ಸತ್ಯಾಗ್ರಹ ಮಾಡಿದ್ದಾರೆ. ನಮ್ಮ ಸರ್ಕಾರ ಈ ಬಗ್ಗೆ ಯಾವುದೇ ವಿಚಾರ ಎತ್ತಿಲ್ಲ. ಪ್ರಧಾನ ಮಂತ್ರಿಯವರು ನಮ್ಮವರೇ ಇದ್ದಾರೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಸರ್ವಪಕ್ಷಗಳ ಒಂದು ನಿಯೋಗವನ್ನು ಕರೆದುಕೊಂಡು ಹೋಗುವುದು ಒಂದು. ಮತ್ತು ಬೆಳಗಾವಿ ನಗರಪಾಲಿಕೆ ಏನಿದೆ, ಮಹಾರಾಷ್ಟ್ರಕ್ಕೆ ಬೆಳಗಾವಿಯನ್ನು ಸೇರಿಸಬೇಕು ಎಂದು ತೀರ್ಮಾನ ಮಾಡಿ ಆ ಬಗ್ಗೆ ನಿರ್ಣಯ ಮಾಡಿದ್ದಾರೆ. ಹೋದ ಸಭೆಯಲ್ಲಿ ತಮಗೆ ಗೊತ್ತಿರಬಹುದು. ಹಿಂದಿನ ಮುಖ್ಯ ಮಂತ್ರಿಗಳಿಗೂ ನಮಗೂ ಅದರ ಬಗ್ಗೆಯೇ ಒಂದು ದೊಡ್ಡ ಚರ್ಚೆಯಾಗಿ ವಾದವಿವಾದವಾಯಿತು. ಆ ನಗರಪಾಲಿಕೆಯನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು ಎಂದು ನಮ್ಮ ಆಗ್ರಹ. ಸರ್ಕಾರ ಮಹಾನಗರಪಾಲಿಕೆಯನ್ನು ರದ್ದುಪಡಿಸುತ್ತದೆಯೇ ಇಲ್ಲವೇ? ಮತ್ತು ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗುತ್ತಿರೋ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟತೆ ಮತ್ತೊಂದು ಜಿಲ್ಲೆಗಳ ಪುನರ್‌ವಿಂಗಡಣೆ ಮಾಡುವ ಬಗ್ಗೆ ಸರ್ಕಾರದವರು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಆ ಬಗ್ಗೆ ತಾವೇನು ಹೇಳುತ್ತೀರಿ ಹೇಳಿ ಸಂತೋಷ. ನಿಮ್ಮ ಉತ್ತರದ ಬಗ್ಗೆ ನನಗೆ ಸಮಾಧಾನವಾದರೆ ಕುಳಿತುಕೊಳ್ಳುತ್ತೇನೆ, ಇಲ್ಲದಿದ್ದರೆ ಮುಂದಿನ ಕಾರ್ಯಕ್ರಮವೇನು ಎಂದು ಹೇಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೆ ಸನ್ಮಾನ್ಯ ನಿಜಲಿಂಗಪ್ಪನವರು ಈ ವಿಷಯದಲ್ಲಿ ಮಾತನಾಡಿರುವುದನ್ನು ಪೇಪರ್‌ನಲ್ಲಿ ಓದಿದ್ದೀರಿ. ಅವರು ಈಗ ಇರುವ ಹಿರಿಯ ವ್ಯಕ್ತಿಗಳಲ್ಲಿ ಅವರೊಬ್ಬರು. ಮೂವತ್ತು ವರ್ಷ ಆಯಿತು. ಆದರೂ ಕೂಡ ಇವತ್ತಿನವರೆಗೆ ವರದಿಯನ್ನು ನಾನು ತೀರ್ಪು ಎಂದು ಕರೆಯುತ್ತೇನೆ. ತೀರ್ಪು ಅವಾರ್ಡ್ ಬಗ್ಗೆ ಇಂಪ್ಲಿಮೆಂಟ್ ಮಾಡಬೇಕಾಗಿರುವುದು ನಮ್ಮ ಕರ್ತವ್ಯ. ಆದರೂ ಕಾರಣಾಂತರಗಳಿಂದ ಇದು ಆಗಿಲ್ಲ. ಸನ್ಮಾನ್ಯ ಕಯ್ಯಾರ ಕಿಣ್ಣಣ್ಣ ರೈ ರವರು ಕಾಸರಗೋಡಿನಿಂದ ಇಲ್ಲಿಗೆ ಬಂದಿದ್ದರು. ಅವರೂ ಕೂಡ ಕಾಸರಗೋಡು ಯಾವಾಗ ಇಲ್ಲಿಗೆ ಸೇರುತ್ತೋ ತಮ್ಮ ಜೀವಂತ ಕಾಲದಲ್ಲಿ ಇದು ಆಗುತ್ತದೋ ಅಥವಾ ಇಲ್ಲವೋ ಎಂದು ಒಂದು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಾನಾದರೂ ಕೇಳಿಕೊಳ್ಳುವುದು ಇಷ್ಟೆ. ಈ ಸದನದಲ್ಲಿ ತಕ್ಷಣ ಈ ತೀರ್ಪನ್ನು ಅನುಷ್ಠಾನ ತರುವುದಕ್ಕೆ ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲಾ ಜಿಲ್ಲಾ ಪರಿಷತ್‌ಗಳ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರ ಒಂದು ನಿರ್ಣಯವಾಗಬೇಕು. ಮಹಾರಾಷ್ಟ್ರದಲ್ಲಿ ಯಾವ ರೀತಿ ಆಗುತ್ತಾ ಇದೆಯೋ ಅದೇ ಪ್ರಕಾರ ಇಲ್ಲಿ ಕೂಡ ಆದರೆ ಒತ್ತಡ ತಂದರೆ ಆಗುತ್ತದೆ. ಈಗ ನಮ್ಮವರೇ ಆದಂಥವರು ಪ್ರಧಾನ ಮಂತ್ರಿಯಾಗಿರುವುದರಿಂದ ತರುವುದಕ್ಕೆ ಕಷ್ಟವಾಗುವುದಿಲ್ಲ. ಇಂದಿರಾ ಗಾಂಧಿಯವರ ಕಾಲದಲ್ಲಿ ಆಗಿಲ್ಲ. ರಾಜೀವ್ ಗಾಂಧಿಯವರ ಕಾಲದಲ್ಲಿ ಆಗಿಲ್ಲ. ಯಾರೂ ಕೂಡ ಮಾಡಲಿಲ್ಲ. ಈಗಲಾದರೂ ಅದು ಆಗುವುದಕ್ಕೆ ಪ್ರಯತ್ನಪಟ್ಟರೆ ಇದಾಗುತ್ತದೆ. ಇದರ ಬಗ್ಗೆ ನಮ್ಮದು ಒಂದು ನಿಯೋಗ ಅಲ್ಲಿಗೆ ಹೋಗಿ ಒತ್ತಡ ತಂದರೆ ಬೇಗ ಆಗಬಹುದು ಎನ್ನುವ ಬಗ್ಗೆ ಒಂದು ಸಾರ್ವನುಮತದ ತೀರ್ಮಾನ ಇಲ್ಲಿ ಆಗಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

MR. SPEAKER:- Mr. B.I. Patil or Mr. Narayana Rao Tarale, who will speak? Only one is permitted to speak.

SRI B.I. PATIL:- I will speak Sir, Mr. Speaker Sir, this issue is pending since 40 years. Therefore, our people have sent us as their representatives. The Mahajan Commission has not followed any principle. Therefore, we are opposing. Last year also we have staged a walk out. Therefore the Chief Minister....

MR. SPEAKER:- Only if that issue is there, you will come to the Assembly. Otherwise, you cannot.

SRI B.I. PATIL:- For that purpose we have come.

(ಗೊಂದಲ)

ಶ್ರೀ ಚಂದ್ರಕಾಂತ ಬೆಲ್ಲದ್:- ಇದು ಕೊನೆಯ ಹಂತದ ನಿರ್ಣಯ.

ಶ್ರೀ ವಾಟಾಳ್ ನಾಗರಾಜ್:- ಆ ಬೆಳಗಾವಿ ಮಹಾನಗರಪಾಲಿಕೆಯನ್ನು ರದ್ದುಪಡಿಸುತ್ತಾರೋ ಇಲ್ಲವೋ ಎಂಬುದನ್ನು ಮೊದಲು ಸ್ಪಷ್ಟಪಡಿಸಬೇಕು.

(ಗೊಂದಲ)

MR. SPEAKER:- Please be seated.

ಅಧ್ಯಕ್ಷರು:- ಸನ್ಮಾನ್ಯ ವಾಟಾಳ್ ನಾಗರಾಜ್ ಅವರೇ, ನಾನೇನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಅವರೂ ಕೂಡ ಈ ಸದನಕ್ಕೆ ಆರಿಸಿ ಬಂದಿರತಕ್ಕ ಸದಸ್ಯರು. ಅವರು ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ನಾವು ಅವಕಾಶ ಕೊಡಲೇ ಬೇಕಾದಂತಹ ಒಂದು ಔದಾರ್ಯವನ್ನು ತೋರಬೇಕು. ಅವರು ಹೇಳಿದ್ದನ್ನು ನಾವು ಒಪ್ಪುತ್ತೇವೆ ಎನ್ನುವ ಪ್ರಶ್ನೆ ಬೇರೆ. ಈಗ ತಾವೆಲ್ಲರೂ ಹೇಳಿದ್ದೀರಿ. ನಾನೂ ಕೂಡ ಒಬ್ಬ ಕನ್ನಡಿಗನೇ. ನಾನು ನಿಮ್ಮ ಅಭಿಪ್ರಾಯಕ್ಕೆ ಒಪ್ಪಿಕೊಳ್ಳತಕ್ಕವನು. ಆದರೆ ಅವರು ಈ ಸದನದ ಸದಸ್ಯರು ಅಲ್ಲವೇ? ಅವರೂ ಸಹ ಆರಿಸಿ ಬಂದಿದ್ದಾರೆ. ಆದರಿಂದ ಅವರ ಮಾತು ಕೇಳಬೇಕು ಅವರು ಹೇಳುವುದು ಹೇಳಲಿ. ನಾವು ಅದಕ್ಕೆ ಅಡ್ಡ ಬರಬಾರದು.

ಶ್ರೀ ವಾಟಾಳ್ ನಾಗರಾಜ್:- ಅವರು ಹೇಳುವುದಕ್ಕೆ ನಾವು ವಿರೋಧ ಮಾಡುತ್ತಿಲ್ಲ. ಅವರು ನಮ್ಮ ರಾಜ್ಯದಲ್ಲಿರತಕ್ಕವರು. ನಮ್ಮ ಭೂಮಿಯಲ್ಲಿರತಕ್ಕವರು. ಬೆಳಗಾವಿ ನಮ್ಮದೇ. ಅವರು ಬೆಳಗಾವಿ ನಮ್ಮದೇ ಎಂದು ಹೇಳಬೇಕೇ ಹೊರತು ಬೆಳಗಾಮನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತೇವೆ ಎಂದು ಹೇಳಿದರೆ ಅದು ಪ್ರಶ್ನೆ ಅಲ್ಲ. ಅದು ಸಾಧ್ಯ ಇಲ್ಲ. ಅದನ್ನು ಹೇಳುವುದಕ್ಕೆ ಸಾಧ್ಯವೇ ಇಲ್ಲ.

ಅದು ಸಾಧ್ಯ ಇಲ್ಲ. ಅದು ಸ್ಪಷ್ಟ. ನಾನು ತಮಗೆ ಹೇಳುತ್ತಿದ್ದೇನೆ.ಅದರ ಬಗ್ಗೆ ನನ್ನ ವಿರೋಧ ಇಲ್ಲ.

ಅಧ್ಯಕ್ಷರು:- ನನ್ನ ಸಮಸ್ಯೆಯನ್ನು ಸಹ ತಾವು ದಯಮಾಡಿ ಅರ್ಥ ಮಾಡಿಕೊಳ್ಳಿ. please be seated Mr. Patil.

ಶ್ರೀ ವಾಟಾಳ್ ನಾಗರಾಜ್:- ನನಗೆ ಅವರ ಬಗ್ಗೆ ವೈಯಕ್ತಿಕ ದ್ವೇಶ ಇಲ್ಲ.

ಅಧ್ಯಕ್ಷರು:- ನಾನು ಹೇಳತಕ್ಕದ್ದು ಇಷ್ಟೇ. ದಯಮಾಡಿ, ಎಲ್ಲ ಹಿರಿಯ ಸದಸ್ಯರು ಆ ಕಡೆ ಈ ಕಡೆ ಇದ್ದಾರೆ. ಆಲೋಚನೆ ಮಾಡಿ. ಇದು ಜನ ಪ್ರತಿನಿಧಿಗಳ ಸಭೆ. ನಮ್ಮ ರಾಜ್ಯಾಂಗದಲ್ಲಿ, ಸಂವಿಧಾನದಲ್ಲಿ ಸೂಚಿಸಿರುವ ಪ್ರಕಾರ ನ್ಯಾಯಾಂಗ ಪ್ರಕಾರವಾಗಿ ಅವರೂ ಈ ಸದನಕ್ಕೆ ಆರಿಸಿ ಬಂದಿದ್ದಾರೆ. ನ್ಯಾಯಬದ್ಧವಾಗಿ ಈ ಸದನಕ್ಕೆ ಆರಿಸಿ ಬಂದಿದ್ದಾರೆ. ಅವರು ತಮ್ಮ ಅಭಿಪ್ರಾಯ ಹೇಳುವುದಕ್ಕೆ ನಾವು ಮೊಟಕು ಮಾಡಬಾರದು. ಅವರಿಗೆ ಅವಕಾಶ ಕೊಡಬೇಕು. ನಾವು ಅದನ್ನು ಒಪ್ಪುತ್ತೇವೆ ಅಥವಾ ಬಿಡುತ್ತೇವೆ ಎನ್ನುವ ಮಾತು ಬೇರೆ. Let them have their say. ಅವರು ಏನು ಮಾತು ಹೇಳುತ್ತಾರೆ ಕೇಳೋಣ.

ಶ್ರೀ ವಾಟಾಳ್ ನಾಗರಾಜ್:- ಅದನ್ನೇ ಹೇಳುತ್ತಿರುವುದು. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಹೇಳುತ್ತಾರೆ. ಇಲ್ಲಿ ಆಗಬೇಕಾಗಿದೆಯೇ ಅದು.

SRI B.I. PATIL:- I have got right.

(INTERRUPTION)

ಶ್ರೀ ವಾಟಾಳ್ ನಾಗರಾಜ್:- ಇದು ರೆಕಾರ್ಡ್‌ಗೆ ಹೋಗಬೇಕೇ? ಇದನ್ನು ನಾನು ಒಪ್ಪುವುದಿಲ್ಲ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

SRI B.I. PATIL:- We have got right. For that purpose people have elected us.

(INTERRUPTION)

ಶ್ರೀ ಚಂದ್ರಕಾಂತ್ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ಅವರು ಸತತವಾಗಿ ಈ ಸದನದಲ್ಲಿ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಸೇರಿಸಬೆಕು ಎನ್ನತಕ್ಕ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು:- ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ. ದಯಮಾಡಿ ಕೇಳಿ ಈ ಸದನ ಈ ವಿಚಾರಕ್ಕೆ ಸಂಬಂಧಿಸಿದಂತೆ ಈ ರಾಜ್ಯ ಸರ್ಕಾರಗಳು ಈ ಹಿಂದೆ, ಈಗಾಗಲೇ ಒಂದು ಖಚಿತವಾದ ನಿಲುವನ್ನು ತಾಳಿವೆ. ಒಂದು ನಿರ್ಣಯ ತೆಗೆದುಕೊಂಡಿದೆ. ಅದರ ಬಗ್ಗೆ ಬೇರೆ ಚರ್ಚೆ ಅನಾವಶ್ಯಕ. ಯಾವ ನಿಲುವನ್ನು ಈ ಸದನ ಈ ಹಿಂದೆ ತಾಳಿದೆ, ಆ ನಿಲುವಿಗೆ ನಾನು ತಾವು ಎಲ್ಲರೂ ಬದ್ದರು. ಇಡೀ ಸದನ ಬದ್ಧ. ಅವರು ಹೇಳತಕ್ಕ ಸನ್ನಿವೇಶದಲ್ಲಿ ಹಿಂದೆ ಈ ಸದನ ತಾಳಿರತಕ್ಕ ನಿಲುವಿಗೆ ವಿರುದ್ಧವಾದಂತಹ ಯಾವುದೇ ಮಾತು ಹೇಳಿದರೂ ಕೂಡ ಅದು ಕಡತದಲ್ಲಿರುವುದಿಲ್ಲ. ಆದರೆ ಅವರಿಗೆ ಮಾತನಾಡಲು, ಅವರು ಏನು ಹೇಳುತ್ತಾರೆಂದು ಕೇಳಲು ನಾನು ಅವಕಾಶ ಕೊಡಬೇಕಲ್ಲ. ಈಗ ಅವರು ಆ ವಿಚಾರವನ್ನು ಬಿಟ್ಟು ಬೇರೆ ಏನಾದರೂ ಹೇಳಿದರೆ, ಅದು ಇರುತ್ತದೆ. ಒಂದು ವೇಳೆ ಈ ಸದನ ಈಗಾಗಲೇ ಒಂದು ನಿರ್ಣಯಕ್ಕೆ ಬಂದಿದೆ. ಬೆಳಗಾವಿ ನಮ್ಮ ಭಾಗ. ಯಾವ ಕಾರಣಕ್ಕೂ ನಾವು ಬಿಡುವುದಿಲ್ಲ ಎಂದು ಈ ಸದನ ಈಗಾಗಲೇ ತೀರ್ಮಾನ ಮಾಡಿದೆ. ಸದನದಲ್ಲಿ ನಿರ್ಣಯಗಳು ಆಗಿವೆ ನಾನ್ಯಾರು ಅದನ್ನು ಬದಲಾಯಿಸುವುದಕ್ಕೆ? ನಾನೇನು ಹೇಳುತ್ತಿದ್ದೇನೆಂದರೆ ಅವರು ಮಾತನಾಡತಕ್ಕ ಅವಧಿಯೊಳಗೆ ಅದಕ್ಕೆ ವಿರುದ್ಧವಾದ ಯಾವುದೇ ಮಾತು ಬಂದರೂ ಕೂಡ ಅದನ್ನು ನಾನು ಕಡತದಲ್ಲಿ ಹೋಗುವುದಕ್ಕೆ ಬಿಡುವುದಿಲ್ಲ. ಪತ್ರಿಕೆಯವರಿಗೂ ಅಚ್ಚು ಮಾಡಬಾರದು ಎಂದು ಹೇಳುತ್ತೇನೆ. ಆದರೆ ಅವರು ಈ ಸದನಕ್ಕೆ ಆರಿಸಿ ಬಂದಿರುವ ಸದಸ್ಯರು. ಅವರು ಏನು ಹೇಳುತ್ತಾರೋ ಅದಕ್ಕೆ ಅವಕಾಶ ಕೊಡುತ್ತೇನೆ. ಅವರು ಅದಲ್ಲದೇ ಬೇರೆ ವಿಚಾರ ಹೇಳಿದರೆ ರೆಕಾರ್ಡ್‌ನಲ್ಲಿರುತ್ತದೆ. ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದರೆ,- ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯಮಾಡಿ ನನ್ನಲ್ಲಿ ತಾವು ವಿಶ್ವಾಸವನ್ನು ಇಡಬೇಕು. ಅವರು

ಆ ನಿರ್ಣಯಕ್ಕೆ ವಿರುದ್ಧವಾಗಿ ಒಂದು ಮಾತು ಹೇಳಿದರೂ ಕೂಡ ಅದು ದಾಖಲೆಗೆ ಹೋಗುವುದಿಲ್ಲ. ಪತ್ರಿಕೆಯವರಿಗೂ ಕೂಡ ನಾನು ಈಗಲೇ ಹೇಳಿಬಿಡುತ್ತೇನೆ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಪದೇ ಪದೇ ನಮ್ಮ ಬಿ.ಐ. ಪಾಟೀಲ್ ಅವರು ನಾನು ಹೋಗುತ್ತೇನೆ, ನಾನು ಹೋಗುತ್ತೇನೆಂದು ಹೇಳುತ್ತಿದ್ದಾರೆ. ಅವರ ಸೂಟ್‌ಕೇಸು, ಗಂಟು ಮೂಟೆ ಏನಾದರೂ ಇದ್ದರೆ ಕಟ್ಟಿಕೊಂಡು ಬಾಂಬೆಗೆ ಹೋಗಲಿ. ಬೆಳಗಾಂ ಇರುವ ಹಾಗೆ ಅಲ್ಲೇ ಇರುತ್ತದೆ. ಅವರು ಹೋಗಬೇಕಾದರೆ ಅಲ್ಲಿ ಬಾಳಾ ಠಾಕ್ರೆಯವರ ಹತ್ತಿರ ಮಾತನಾಡಿಕೊಳ್ಳಲಿ.

ಅಧ್ಯಕ್ಷರು:- ಪಾಟೀಲ್ ಅವರೆ, ತಾವು, ನಾರಾಯಣ ರಾವ್ ತರಾಳೆ ಹಾಗೂ ಅಶೋಕ್ ಪಾಟೀಲ್ ಅವರು, ಎಂ ಇ ಎಸ್ ಸದಸ್ಯರು ಏನು ಇದ್ದೀರಿ, ತಮ್ಮ ಪರವಾಗಿ ಒಬ್ಬರು ಮಾತನಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಮಾತನಾಡತಕ್ಕ ಅವಧಿಯಲ್ಲಿ ಈ ಹಿಂದೆ ಆಗಲೇ ಕರ್ನಾಟಕ ವಿಧಾನ ಸಭೆ ಈ ವಿಚಾರದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಒಂದು ಸಲ ತೆಗೆದುಕೊಂಡಿರತಕ್ಕ ನಿರ್ಣಯ; ಅದು ನಮ್ಮೆಲ್ಲರ ಮೇಲೂ ಕೂಡ ಬದ್ಧವಾಗಿರುತ್ತದೆ. ನಾವೆಲ್ಲರೂ ಕೂಡ ಅದಕ್ಕೆ ಪಾರ್ಟಿ. ಅದನ್ನು ವಿರೋಧಿಸಿ ಮಾತನಾಡತಕ್ಕ ಹಕ್ಕು ನಿಮಗೆ ಇರುವುದಿಲ್ಲ. ಆ ನಿರ್ಣಯಕ್ಕೆ ವಿರುದ್ಧವಾದಂತಹ ಮಾತುಗಳನ್ನು ನೀವೇನಾದರೂ ಹೇಳುವುದಾದರೆ ಅದು ಕಡತದಲ್ಲಿ ಹೋಗುವುದಿಲ್ಲ. ಅದನ್ನು ಬಿಟ್ಟು ಬೇರೆ ಅಹವಾಲು ಇರುವುದಾದರೆ ಅದನ್ನು ತಾವು ತಿಳಿಸಬಹುದು; ನೀವು ಈ ಸದನದ ಸದಸ್ಯರಾಗಿರುವುದರಿಂದ ಮಾತನಾಡಲು ನಿಮಗೆ ಅವಕಾಶವನ್ನು ಕೊಡುತ್ತೇನೆ. ಆದರೆ ನೀವು ಬೆಳಗಾಂ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು ಹೇಳಲು ಅವಕಾಶ ಇಲ್ಲ. ಕಾರಣ ಏನು ಎಂದರೆ ಹೋಗುವುದಕ್ಕೆ ಆಗುವುದಿಲ್ಲ. ಅದು ನಮ್ಮ ಭಾಗ ಎಂದು ಈಗಾಗಲೇ ಈ ಸದನ ನಿರ್ಣಯ ತೆಗೆದುಕೊಂಡಿದೆ. ಆ ನಿರ್ಣಯವನ್ನು ಉಲ್ಲಂಘನೆ ಅಧಿಕಾರ ನನಗೆ ಇರುವುದಿಲ್ಲ. ತಾವು ಇಲ್ಲ ನಾವು ಅದನ್ನೇ ಹೇಳುವುದೇ ಎನ್ನುವುದಾದರೆ ಮಾಮೂಲಾಗಿ ರಾಜ್ಯಪಾಲರ ಭಾಷಣ, ಮತ್ತಿತರ ವಿಷಯಕ್ಕೆ ಮಾಡಿದ ಹಾಗೆ ಮಾಡಿ ಬಿಡಬಹುದು.

(INTERRUPTION)

This House cannot reopen that matter. This Hon'ble House has already taken a decision in this regard. All of us are party to it. As legitimately elected members of this House, You will be provided an opportunity to express your views. But during the course of expression of your views, you have no right to contravene or contradict the earlier decision passed by this House. I am providing you an opportunity to express your views.

SRI B.I. PATIL:- I have got right to speak.

MR. SPEAKER:- That's why you are getting an opportunity. You cannot speak from there. Whatever you speak from there will not go into records. Please resume to your seats. I am giving you an opportunity as members of this Hon'ble House to express your views. But you shall not express anything which shall contravene or contradict the earlier decision passed by this Hon'ble House. Please resume to your seats and express whatever you want. You shall please go to your seats.

(Sri B.I. PATIL:- Was speaking from the well) Please speak in the language I understand. Please go to your seats. Mr. Narayan Rao Tarale would you like to speak?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ- ಅಧ್ಯಕ್ಷರೆ, ಅವರು ಮಾತನಾಡುವ ಮುಂಚೆ..

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ಮಾನ್ಯ ವಾಟಾಳ್ ಅವರೇ. ನೀವು ಏಕೆ ಶ್ರಮ ತೆಗೆದುಕೊಳ್ಳುತ್ತೀರಿ? ನಿಮ್ಮ ಕೆಲಸ ನಾನು ಮಾಡುತ್ತೇನೆ. ನಿಮ್ಮ ಸೀಟಿಗೆ ನಡೆಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ಹೇಳಿದ ಹಾಗೆ ಈ ಸದನದಲ್ಲಿ ಯುನಾನಿಮಸ್ ಡಿಸಿಷನ್ ಆಗಿದೆ. ಅದಕ್ಕೆ ಯಾವುದಕ್ಕೂ ಕೂಡ ಡಿಸೆಂಟ್ ಒಬ್ಬರೂ ಕೊಟ್ಟಿಲ್ಲ. ಯುನಾನಿಮಸ್ ಡಿಸಿಷನ್, ರೆಸಲ್ಯೂಷನ್ ಆದ ಮೇಲೆ Every Member loses his right even to raise it. Because he is a party to that resolution. ಈ ಸದನದಲ್ಲಿರತಕ್ಕ 225 ಜನ ಕೂಡ ಒಮ್ಮತದಿಂದ ಪಾಸ್ ಮಾಡಿದಂತಹ ರೆಸ್ಲ್ಯೂಷನ್ ಅಂದಾಗ ಪುನಃ ಆಗ ಅವರೇನು ಪ್ರೊಟೆಸ್ಟ್ ಮಾಡಬೇಕಿತ್ತು ಆವರು ಆಗಲೇ ಮಾಡಿದರು. ಹೊರಗಡೆ ಹೋದರು. ಪುನಃ ಪುನಃ ಅದನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕ ಅವಶ್ಯಕತೆ ಇಲ್ಲಿ ಬರುವುದಿಲ್ಲ.

ಅಧ್ಯಕ್ಷರು:- ತಾವು ಹೇಳಿದ ಮಾತನ್ನೇ ಸಮರ್ಥಿಸುತ್ತಾ ವಾಟಾಳ್ ನಾಗರಾಜ್ ಅವರು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಅವರೆಲ್ಲಾ ಎದ್ದು ಮಾತನಾಡುತ್ತಾ ಈ ಮೊದಲೇ ಆಗಿರತಕ್ಕ ನಿರ್ಣಯವನ್ನು ಸಮರ್ಥಿಸಿ ಇದು ಬೇಗ ಆಗಬೇಕು ಎಂದು ಹೇಳಿದರು. ಅವರಿಗೂ ಮನಸ್ಸು ಪರಿವರ್ತನೆ ಆಗಿರಬಹುದು. ಅವರೂ ಅದೆ ಮಾತನ್ನು ಹೇಳುವುದಿದ್ದರೆ ಹೇಳಬಹುದು ಸ್ವಾಗತ ಇದೆ. ಅದಕ್ಕೆ ವಿರುದ್ಧವಾದ ಮಾತು ಹೇಳಿದರೆ I will tell them not to do it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪದೇ ಪದೇ ಹೋಗುತ್ತೇವೆಂದು ಹೇಳುತ್ತಾರೆ ಬೇಕಾದರೆ ಸೂಟ್‌ಕೇಸ್ ಕೊಟ್ಟು ಕಳಿಸಿ ಬಿಡಿ.

ಅಧ್ಯಕ್ಷರು:- ಯಾರೂ ಹೋಗುವುದು ಬೇಡ.

ಶ್ರಿ ಚಂದ್ರಕಾಂತ್ ಬೆಲ್ಲದ್:- ಸಂತೋಷದಿಂದ ಕಳಿಸಿ ಬಿಡೋಣ. ಗಲಾಟೆ ಬೇಡ ಎಂದು ಕಳಿಸಿ ಬಿಡೋಣ.

(INTERRUPTION)

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಸಭಾಧ್ಯಕ್ಷರೆ, ಇಲ್ಲ ಎರಡು ರೀತಿಯ ಭಾಷಾ ಸಮಸ್ಯೆ. ಆ ಬೆಳಗಾವ್‌ದು ಒಂದು ಸಮಸ್ಯೆ ಇದ್ದರೆ, ಸದನದಲ್ಲಿ ಒಂದು ಸಮಸ್ಯೆ ಇದೆ. I request you to provide English translation of some English speeches.

MR. SPEAKER:- I will very seriously consider this proposition because Iam also facing the same difficulty. Thank you for the advice. Mr. Narayan Rao Tarale, I hope you have understood what the Leader of Opposition has said. This House is a party to the earlier resolution. Each one of us, forfeit our right to do anything contravening the earlier resolution passed by this House. If you have also changed your hearts and also fall in line with Sri Vatal Nagaraj and Smt. Pramila Nesargi you are welcome to do so. If you have to say anything else other than that you will not be permitted to say so. But, since you are Hon'ble members of this House I am giving you the opportunity to use this occassion to vent your views. But, the chair will be very alert. If you spent one word contravening the earlier resolution. I will not permit you to speak.

SRI NARAYAN RAO TARALE:- Sir, the Parliament is seized of the Mahajan Commission Report. It is the right of the Parliament to decide about that. I am not opposing this Resolution, but I am the elected Member from Belgaum City. that is why I have to say few words about my views. Sri Vatal Nagaraj has no moral right speak about Belgaum because I am the elected representative from Belgaum, and I have to say about Belgaum.

(INTERRUPTION)

MR. SPEAKER:- I will give my ruling.

SRI NARAYANA RAO TARALE:- Sir, for each and everything he is intervening.

(INTERRUPTION)

MR. SPEAKER:- I will give my ruling. Mr. Tarale, each one of who are the members of this House are members of the Karnataka Legislative Assembly. The jurisdiction of the entire Karnataka State is divided into 224 Assembly segments. No Member is prevented from rising an issue pertaining to any part of the State within the jurisdiction of the Karnataka State. As such, Mr. Vatal Nagaraj is well within his rights to raise any issue and he is morally right to raise the issue of Belgaum. You cannot speak like that.

(INTERRUPTION)

SRI B.I. PATIL:- Sir, previously when Sri Nijalingappa was the Chief Minister, when he came to Belgaum, he said, the Belgaum issue is genuine one and it has got to be sorted out amicably. So I request the Government to solve this problem amicably. The harassment caused to Marathi speaking areas should be stopped forthwith. There is harassment to Marathi institutions also.

(INTERRUPTION)

MR. SPEAKER:- We will discuss it later. That matter is closed. The zero Hour is closed and now I am taking up next subject.

SRI B.I. PATIL:- Sir, I have got the right to speak about Belgaum. This resolution... Since beginning we are opposing Mahajan Report.

(INTERRUPTION)

MR. SPEAKER:- Now we are taking up discussion on power.